# ದಾವಣಗೆರೆ ವಿಶ್ವವಿದ್ಯಾನಿಲಯ

ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ, ಶಿವಗಂಗೋತ್ರಿ, ದಾವಣಗೆರೆ-577 002.

ದೂರವಾಣಿ ಸಂಖ್ಯೆ:08192-208420/208104

ಸಂಖ್ಯೆ: ದಾವಿ:ಪವಿ:ಅಶಾ:2016-17/25 ದಿನಾಂಕ:04-04-2017

**ಅಧಿಸೂಚನೆ**

ವಿಷಯ: ಏಪ್ರಿಲ್/ಮೇ-2017ರಲ್ಲಿ ನಡೆಯಲಿರುವ ಬಿ.ಎ/ಬಿ.ಎಸ್ಸಿ/ಬಿ.ಸಿ.ಎ/ಬಿ.ಎಸ್.ಎ/ಬಿ.ಎಫ್.ಡಿ ಪದವಿ ಪ್ರಾಯೋಗಿಕ ಪರೀಕ್ಷೆಗಳಿಗೆ ಮುಖ್ಯ ಅಧೀಕ್ಷಕರುಗಳ ಹಾಗೂ ಕೋ-ಆರ್ಡಿನೇಟರಗಳ ನೇಮಕಾತಿ ಮತ್ತು ಅವರುಗಳಿಗೆ ಸೂಚನೆಗಳು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 03-04-2017

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಏಪ್ರಿಲ್/ಮೇ-2017ರಲ್ಲಿ ನಡೆಯಲಿರುವ ಪ್ರಾಯೋಗಿಕ ಪರೀಕ್ಷೆಗಳಿಗೆ ಆಯಾ ಕಾಲೇಜಿನ ಪ್ರಾಂಶುಪಾಲರನ್ನು ಮುಖ್ಯ ಅಧೀಕ್ಷಕರುಗಳನ್ನಾಗಿ ಮತ್ತು ಕೆಳಗೆ ತಿಳಿಸಿರುವ ಅಧ್ಯಾಪಕರುಗಳನ್ನು ಪ್ರಾಯೋಗಿಕ ಪರೀಕ್ಷಾ ಸಂಯೋಜನಾಧಿಕಾರಿಗಳನ್ನಾಗಿ (ಪ್ರಾಕ್ಟಿಕಲ್ ಕೋ-ಆರ್ಡಿನೇಟರ್) ಮಾನ್ಯ ಕುಲಪತಿಗಳ ಆದೇಶಾನುಸಾರ ನೇಮಕ ಮಾಡಲಾಗಿದೆ.

| Sl No | Subject | Name & Address of the Practical Co-Ordinator | Phone Numbers |
|---|---|---|---|
| 1. | Criminology | Y B Mulimani , Associate Professor Dept of Criminology, Maharaja Madakari Nayaka First Grade College, Chitradurga | 9739197171 |
| 2. | Psychology | Prof. Kubendranaik, Associate professor Dept of Psychology, Maharaja Madakari Nayaka First Grade College, Chitradurga | 8748975226 |
| 3. | Physical Education / B.P.Ed. | Sri Venkatesha T. Principal, CCPE College, Malladihalli | 9900737340 |
| 4. | Physics | M. Surendra, Professor, Dept. of Physics, Govt. Science College, Chitradurga. | |
| 5. | Chemistry | Dr. J.B. Raju. Principal, DRM Science College, Davangere. | 9986692102 |
| 6. | Mathematics | M. Basavarajappa, Associate Professor, Govt. Science College, Chitradurga. | 9739336720 |
| 7. | Botany | N. Shankaramma, Associate Professor, Dept. of Botany Govt. Science College, Chitradurga. | 08194-235598 |
| 8. | Zoology | Dr. Ramesha Iyyanahalli, Associate Professor, Dept. of Zoology Govt. Science College, Chitradurga. | 9986323198 |
| 9. | Geology | Dr. Chandrappa, Associate Professor, Dept. of Geology, Sahyadri Science College, Shivamogga. | 9448043170 |
| 10. | Electronics | Prof. N. Veerabhadrappa. Associate Professor, Dept. of Electronics, ADB First Grade College, Harapanahalli. | 9741956176 |
| 11. | Bio-Chemistry | Roopa K. Assistant Professor, Dept. of Biochemistry, Govt. Science College, Chitradurga. | 9980474634 |
| 12. | Bio-Technology | Sri Sardar Husaain , Lecturer, Dept. of Biotechnology, Govt. Science College, Chitradurga. | 9986294391 |
| 13. | Microbiology | Sri Nataraj B. T. Assistant Professor, Govt. Science College, Chitradurga. | 9741258889 |
| 14. | Computer Science B.A./B.C.A/BSA/BFD | Sri Channakeshava R.N. . Associate Professor, Dept. of Computer Science, Govt. Science College, Chitradurga. | 9741405099 |

**P.T.O.**

# ಮುಖ್ಯ ಅಧೀಕ್ಷಕರಿಗೆ ಸೂಚನೆಗಳು:

1. ಬಿ.ಎ. ಪದವಿಗಳ ಪ್ರಾಯೋಗಿಕ ಪರೀಕ್ಷೆಗಳನ್ನು **ದಿನಾಂಕ:09-05-2017** ರಿಂದ ಪ್ರಾರಂಭಿಸಿ **ದಿನಾಂಕ: 14-05-2017** ಒಳಗೆ ಹಾಗೂ ಬಿ.ಎಸ್ಸಿ/ಬಿ.ಎಸ್ಸಿ(ಹೋಂ)/ಬಿ.ಸಿ.ಎ/ಬಿ.ಎಸ್.ಎ/ ಬಿ.ಎಫ್.ಡಿ/ ಬಿ.ಎಸ್.ಡಬ್ಲ್ಯೂ/ಪದವಿಗಳ ಪ್ರಾಯೋಗಿಕ ಪರೀಕ್ಷೆಗಳನ್ನು **ದಿನಾಂಕ:12-05-2017** ರಿಂದ ಪ್ರಾರಂಭಿಸಿ **ದಿನಾಂಕ: 25-05-2017** ಒಳಗೆ ಮುಕ್ತಾಯಗೊಳ್ಳುವಂತೆ ಸೂಚಿಸಿದೆ. ಈ ಪರೀಕ್ಷೆಗಳ ಕರಡು ವೇಳಾ ಪಟ್ಟಿಯನ್ನು ತಯಾರಿಸಿ ಆಯಾ ವಿಷಯಗಳಿಗೆ ಸಂಬಂಧಪಟ್ಟ ಪರೀಕ್ಷಾ ಸಂಯೋಜನಾಧಿಕಾರಿಗೆ (ಕೋ-ಆರ್ಡಿನೇಟರುಗಳಿಗೆ) **ದಿನಾಂಕ: 28-04-2017** ರ ಒಳಗಾಗಿ ತಲುಪುವಂತೆ ಕಳುಹಿಸಿ ಅದರ ಇನ್ನೊಂದು ಪ್ರತಿಯನ್ನು ಕುಲಸಚಿವರು(ಪರೀಕ್ಷಾಂಗ)ರವರ ಕಛೇರಿಗೆ ಕಳುಹಿಸಬೇಕು.
2. ಪ್ರಾಯೋಗಿಕ ಪರೀಕ್ಷೆಯ ಪ್ರತಿಯೊಂದು ತಂಡದಲ್ಲಿ ಒಬ್ಬ ಬಾಹ್ಯ ಪರೀಕ್ಷಕರು ಇರುವಂತೆ ನೋಡಿಕೊಳ್ಳಬೇಕು.
3. ಯಾರಾದರೂ ಬಾಹ್ಯ ಪರೀಕ್ಷಕರು ಬಾರದಿದ್ದಲ್ಲಿ ಹತ್ತಿರದ ಮತ್ತೊಂದು ಕಾಲೇಜಿನಿಂದ ಬಾಹ್ಯ ಪರೀಕ್ಷಕರನ್ನು ನೇಮಿಸಿ, ಇದನ್ನು ಸಂಬಂಧಪಟ್ಟ ಸಂಯೋಜನಾಧಿಕಾರಿಗೆ ಮತ್ತು ಕುಲಸಚಿವರು(ಪರೀಕ್ಷಾಂಗ) ಇವರಿಗೆ ಅದೇ ದಿನವೇ ತಿಳಿಸಬೇಕು. ಒಂದು ವೇಳೆ ಬಾಹ್ಯ ಪರೀಕ್ಷಕರು ಲಭ್ಯವಾಗದಿರುವ ಸಂದರ್ಭ ಬಂದರೆ, ಅಂತಹ ಪ್ರಾಯೋಗಿಕ ಪರೀಕ್ಷೆಯನ್ನು ರದ್ದುಪಡಿಸಿ ಮುಂದೂಡಬೇಕು. ಹಾಗೂ ತತ್ಸಂಬಂಧವಾಗಿ ವಿಷಯವನ್ನು ಅಂದೇ ಕುಲಸಚಿವರು(ಪರೀಕ್ಷಾಂಗ) ಅವರಿಗೆ ತಿಳಿಸಬೇಕು.
4. ಯಾವುದೇ ಕಾರಣಕ್ಕೂ ಒಂದು ತಂಡಕ್ಕೆ ಇಬ್ಬರೂ ಆಂತರಿಕ ಪರೀಕ್ಷಕರಾಗಿರಕೂಡದು ಮತ್ತು ವಿಶ್ವವಿದ್ಯಾನಿಲಯದಿಂದ ಅನುಮೋದಿತಗೊಂಡ ಪರೀಕ್ಷಕರ ಪಟ್ಟಿಯಲ್ಲಿದ್ದವರನ್ನು ಮಾತ್ರ ಪರೀಕ್ಷಕರನ್ನಾಗಿ ನೇಮಿಸಬೇಕು.
5. ಯಾವುದೇ ಒಂದು ವಿಷಯದಲ್ಲಿ ಅಭ್ಯರ್ಥಿಗಳ ಸಂಖ್ಯೆ 10 ಕ್ಕಿಂತ ಕಡಿಮೆ ಇದ್ದಲ್ಲಿ, ಅಂತಹ ಅಭ್ಯರ್ಥಿಗಳಿಗೆ ಅವರ ಪ್ರಾಯೋಗಿಕ ಪರೀಕ್ಷೆಯ್ನು ಹತ್ತಿರದ ಮತ್ತೊಂದು ಕಾಲೇಜಿನಲ್ಲಿ ತೆಗೆದುಕೊಳ್ಳಲು ವ್ಯವಸ್ಥೆ ಮಾಡಲು ಕೋರಿ ಸಂಬಂಧಪಟ್ಟ ಸಂಯೋಜನಾಧಿಕಾರಿಗೆ ಹಾಗೂ ಕುಲಸಚಿವರು(ಪರೀಕ್ಷಾಂಗ) ಇವರಿಗೆ ತಿಳಿಸಬೇಕು.
6. ನಿಗಧಿಪಡಿಸಿದ ತಂಡದೊಂದಿಗೆ ಯಾವುದೇ ಅಭ್ಯರ್ಥಿ ಪರೀಕ್ಷೆಗೆ ಹಾಜರಾಗದಿದ್ದರೆ, ಆ ಅಭ್ಯರ್ಥಿಗೆ ಮತ್ತೊಂದು ತಂಡದಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡಕೂಡದು, ಇಂತಹ ಅಭ್ಯರ್ಥಿಯು ಆ ಪರೀಕ್ಷೆಗೆ ಗೈರುಹಾಜರು ಎಂದು ಪರಿಗಣಿಸಬೇಕು.
7. ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಲು ಬರುವ (External) ಉಪನ್ಯಾಸಕರು ವಿದ್ಯಾರ್ಥಿಗಳಿಗೆ ತೊಂದರೆ ನೀಡಿದ್ದಲ್ಲಿ ಅವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು.
8. ಪ್ರಾಯೋಗಿಕ ಪರೀಕ್ಷೆ ನಡೆದಾಗ ಪ್ರತಿ ದಿನ ಪ್ರತಿ ವಿಷಯದಲ್ಲಿ ನಡೆಸಲಾದ ಎರಡು ತಂಡಗಳ ಅಂಕಪಟ್ಟಿಗಳನ್ನು ತಂಡದ ಪರೀಕ್ಷಕರು ಸಲ್ಲಿಸಿ ಮೊಹರು ಮಾಡಿದ ಅಂಕಪಟ್ಟಿ ಲಕೋಟೆಗಳು ಆಯಾ ವಿಷಯದ ಪ್ರಾಯೋಗಿಕ ಪರೀಕ್ಷೆಗಳು ಮುಗಿದ ಕೂಡಲೇ ಕುಲಸಚಿವರು(ಪರೀಕ್ಷಾಂಗ)ರವರಿಗೆ ಕಳುಹಿಸಿಕೊಡಬೇಕು.
9. ಪ್ರಾಯೋಗಿಕ ಪರೀಕ್ಷೆ ನಂತರ ಕ್ರೋಢಿಕೃತ ಕಾರ್ಯನಿರ್ವಹಣಾ ತಃಖ್ತೆಯನ್ನು ವಿಶ್ವವಿದ್ಯಾನಿಲಯ ನಿಗಧಿಪಡಿಸಿದ ನಮೂನೆಯಲ್ಲಿ ಕುಲಸಚಿವರು(ಪರೀಕ್ಷಾಂಗ)ರವರಿಗೆ ಪ್ರಾಯೋಗಿಕ ಪರೀಕ್ಷೆ ಮುಗಿದ 15 ದಿನಗಳೊಳಗಾಗಿ ಸಲ್ಲಿಸಬೇಕು.
10. ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸುವಾಗ ಅಂಕಪಟ್ಟಿ ತಃಖ್ತೆಯನ್ನು ಸರಿಯಾಗಿ ಬರೆಯದೆ ತಪ್ಪಾಗಿ ದಾಖಲಿಸುವುದು ಸಾಮಾನ್ಯವಾಗಿದೆ. ಈ ಬಗ್ಗೆ ಇಬ್ಬರೂ ಪರೀಕ್ಷಕರುಗಳು ಹೆಚ್ಚಿನ ಸಮಯ ಹರಿಸಿ ತಪ್ಪುಗಳು ಆಗದಂತೆ ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸುವುದು ಹಾಗೂ ಸೀಲ್ ಮಾಡಿದ ಅಂಕಪಟ್ಟಿ ಲಕೋಟೆಗಳನ್ನು ತಕ್ಷಣ ವಿಶ್ವವಿದ್ಯಾನಿಲಯಕ್ಕೆ ಕಳುಹಿಸುವುದು.
11. ಕೆಲವು ಕಾಲೇಜಿನವರು ಉತ್ತರ ಪತ್ರಿಕೆ ಬಂಡಲ್ ಗಳಲ್ಲಿಯೇ ಸೀಲ್ ಮಾಡಿದ ಅಂಕಪಟ್ಟಿ ಲಕೋಟೆಗಳನ್ನು (ಕವರ್ಸ್) ಇರಿಸಿ ಪ್ರಾಯೋಗಿಕ ಪರೀಕ್ಷೆ ಮುಗಿದ ನಂತರ ತಿಂಗಳುಗಟ್ಟಲೇ ಕಾಲೇಜಿನಲ್ಲಿ ಇಟ್ಟುಕೊಂಡು ಜಾಗೃತ ದಳದ ಸದಸ್ಯರ ಮೂಲಕ ಕಳುಹಿಸುವುದನ್ನು ರೂಢಿಸಿಕೊಂಡಿರುತ್ತಾರೆ. ಆ ರೀತಿ ಆಗದಂತೆ ಸೀಲ್ ಮಾಡಿದ ಎಲ್ಲಾ ಅಂಕಪಟ್ಟಿ ಲಕೋಟೆಗಳನ್ನು ಮಾತ್ರ ಪ್ರತ್ಯೇಕಿಸಿ, ಸಂಸ್ಥೆಗೆ ಸಂಬಂಧಿಸಿದ ಎಲ್ಲಾ ಪ್ರಾಯೋಗಿಕ ಪರೀಕ್ಷೆ ಅಂಕ ತಃಖ್ತೆಯನ್ನು ಒಂದೇ ಬಂಡಲ್ ನಲ್ಲಿ ಇಟ್ಟು **ಡಾ|| ಕೆ.ಎನ್. ಗಂಗಾನಾಯಕ್ ಕುಲಸಚಿವರು(ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ** ಇವರ ಹೆಸರಿಗೆ ಪರೀಕ್ಷೆ ಮುಗಿದ ತಕ್ಷಣ ಕಳುಹಿಸತಕ್ಕದ್ದು (ಉತ್ತರ ಪತ್ರಿಕೆಗಳನ್ನು ನಂತರದಲ್ಲಿ ಕಳುಹಿಸಬಹುದು).

## ಪ್ರಾಯೋಗಿಕ ಪರೀಕ್ಷೆಗಳ ಸಂಯೋಜನಾಧಿಕಾರಿಗಳಿಗೆ(ಕೋ-ಆರ್ಡಿನೇಟರ್ ಗಳಿಗೆ) ಸೂಚನೆಗಳು:

1. ಬಿ.ಎ. ಪದವಿಗಳ ಪ್ರಾಯೋಗಿಕ ಪರೀಕ್ಷೆಗಳನ್ನು ದಿನಾಂಕ:09-05-2017 ರಿಂದ ಪ್ರಾರಂಭಿಸಿ ದಿನಾಂಕ: 14-05-2017 ಒಳಗೆ ಹಾಗೂ ಬಿ.ಎಸ್ಸಿ/ಬಿ.ಎಸ್ಸಿ(ಹೋಂ)/ಬಿ.ಸಿ.ಎ/ಬಿ.ಎಸ್.ಎ/ ಬಿ.ಎಫ್.ಡಿ/ ಬಿ.ಎಸ್.ಡಬ್ಲ್ಯೂ/ಪದವಿಗಳ ಪ್ರಾಯೋಗಿಕ ಪರೀಕ್ಷೆಗಳನ್ನು ದಿನಾಂಕ:12-05-2017 ರಿಂದ ಪ್ರಾರಂಭಿಸಿ ದಿನಾಂಕ:25-05-2017ರ ಒಳಗೆ ಮುಕ್ತಾಯಗೊಳಿಸಬೇಕು..
2. ಪ್ರಾಯೋಗಿಕ ಪರೀಕ್ಷೆಗಳ ಎಲ್ಲಾ ಸಂಯೋಜನಾಧಿಕಾರಿಗಳು ತಮಗೆ ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರನ್ನು ಪ್ರಾಯೋಗಿಕ ಪರೀಕ್ಷೆ ನಡೆಸುವ ಸಂಬಂಧ ಕೂಡಲೇ ಸಂಪರ್ಕಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.
3. ವಿಶ್ವವಿದ್ಯಾನಿಲಯದಿಂದ ಅನುಮೋದಿಸಲ್ಪಟ್ಟ ಪರೀಕ್ಷಕರ ಪಟ್ಟಿಯಿಂದಲೇ ಪ್ರಾಯೋಗಿಕ ಪರೀಕ್ಷಕರನ್ನು ಆಯ್ಕೆ ಮಾಡಬೇಕು. ಪ್ರಾಯೋಗಿಕ ಪರೀಕ್ಷೆಯ ಪ್ರತಿ ತಂಡಕ್ಕೆ ಇಬ್ಬರು ಪರೀಕ್ಷಕರಾಗಿದ್ದು, ಅವರಲ್ಲಿ ಒಬ್ಬರು ಆಂತರಿಕ ಪರೀಕ್ಷಕರೂ ಇನ್ನೊಬ್ಬರು ಬಾಹ್ಯ ಪರೀಕ್ಷಕರೂ ಆಗಿರಬೇಕು. ಅಸಾಧಾರಣ ಸಂದರ್ಭಗಳಲ್ಲಿ ಇಬ್ಬರೂ ಬಾಹ್ಯ ಪರೀಕ್ಷಕರಾಗಿರಬಹುದು. ಆದರೆ ಯಾವುದೇ ಪ್ರಸಂಗದಲ್ಲೂ ಇಬ್ಬರೂ ಆಂತರಿಕ ಪರೀಕ್ಷಕರಾಗಿರಕೂಡದು.
4. ಬಾಹ್ಯ ಪರೀಕ್ಷಕರನ್ನು ನೇಮಕ ಮಾಡುವಾಗ ಆದಷ್ಟು ಹತ್ತಿರದ ಕಾಲೇಜುಗಳಿಂದ ಆಯ್ಕೆ ಮಾಡಬೇಕೇ ವಿನಃ ದೂರದ ಕಾಲೇಜುಗಳಿಂದಲ್ಲ. ದೂರದ ಕಾಲೇಜುಗಳಿಂದ ಆಯ್ಕೆ ಮಾಡಿದ್ದಲ್ಲಿ ಅವರ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆಗಳ ಹುಂಡಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.
5. ಒಬ್ಬ ಬಾಹ್ಯ ಪರೀಕ್ಷಕರಿಗೆ, ಒಂದು ಅಥವಾ ಎರಡು ಕಾಲೇಜುಗಳಲ್ಲಿ ಮಾತ್ರ ಈ ಪ್ರಾಯೋಗಿಕ ಪರೀಕ್ಷಾ ಕೆಲಸ ವಹಿಸಬೇಕು.
6. ಒಂದು ಪರೀಕ್ಷಾ ಕೇಂದ್ರದಲ್ಲಿ ಒಬ್ಬ ಪರೀಕ್ಷಕರಿಗೆ ಸಾಕಾಗುವಷ್ಟು ಪರೀಕ್ಷಾ ಕೆಲಸವಿದ್ದಾಗ ಅವರ ಭಾಗದ ಆ ಕೆಲಸವನ್ನು ಅದೇ ಕೇಂದ್ರದಲ್ಲಿ ಕೊಡಬೇಕು. ಯಾವುದೇ ಸಂದರ್ಭದಲ್ಲಿಯೂ ಭಾಗಶಃ ಕೆಲಸವನ್ನು ಬೇರೆ ಬೇರೆ ಕೇಂದ್ರಗಳಲ್ಲಿ ಒಬ್ಬರಿಗೆ ಕೊಡಬಾರದು.
7. ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಲು ಬರುವ (External) ಉಪನ್ಯಾಸಕರು ವಿದ್ಯಾರ್ಥಿಗಳಿಗೆ ತೊಂದರೆ ನೀಡಿದ್ದಲ್ಲಿ ಅವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು.
8. ಸಾಧ್ಯವಾದ ಮಟ್ಟಿಗೆ ಎಲ್ಲಾ ಅರ್ಹ ಪರೀಕ್ಷಕರಿಗೆ, ಅವರ ಸೇವಾ ಜೇಷ್ಠತೆ ಮತ್ತು ಅವರ ಪದನಾಮಗಳನ್ನು ಲೆಕ್ಕಿಸದೇ ಪ್ರಾಯೋಗಿಕ ಪರೀಕ್ಷಾ ಕಾರ್ಯದ ಹಂಚಿಕೆಯನ್ನು ಸಾಮಾನ್ಯವಾಗಿ ಮಾಡಬೇಕು.
9. ಸಂಯೋಜನಾಧಿಕಾರಿಗಳು ಮುಖ್ಯ ಅಧೀಕ್ಷಕರಿಗೆ ವಿದ್ಯಾರ್ಥಿಗಳ ಪ್ರಾಯೋಗಿಕ ಪರೀಕ್ಷಾ ತಂಡಗಳನ್ನು ರಚಿಸಿ, ಕರಡು ವೇಳಾಪಟ್ಟಿಯನ್ನು ಸಲ್ಲಿಸುವಂತೆ ಕೋರುವಾಗ ಈ ಕೆಳಕಂಡ ಅಂಶಗಳನ್ನು ಗಮನಿಸುವಂತೆ ತಿಳಿಸಬೇಕು.
   ಅ. ಪ್ರತಿಯೊಂದು ಪ್ರಯೋಗಾಲಯದಲ್ಲಿ ದಿನ ಒಂದಕ್ಕೆ ಎರಡು ತಂಡಗಳು ಪರೀಕ್ಷೆಗೆ ವ್ಯವಸ್ಥೆಗೊಳಿಸತಕ್ಕದ್ದು.
   ಆ. ಸಾಮಾನ್ಯವಾಗಿ ಪ್ರತಿ ತಂಡದಲ್ಲಿ 10 ಜನ ವಿದ್ಯಾರ್ಥಿಗಳು ಇರತಕ್ಕದ್ದು. 10ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳಿದ್ದಲ್ಲಿ, ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳನ್ನು ಆ ಪರೀಕ್ಷೆಯ ಕಡೆಯ ತಂಡಕ್ಕೆ ಸೇರಿಸತಕ್ಕದ್ದು. ಒಂದು ವೇಳೆ ಪ್ರತಿ ತಂಡಕ್ಕೆ 10 ಜನ ವಿದ್ಯಾರ್ಥಿಗಳನ್ನು ಹಂಚಲು ಪ್ರಯೋಗ ಶಾಲೆಯಲ್ಲಿ ಅವಕಾಶಗಳಿಲ್ಲದಿದ್ದಲ್ಲಿ, ಸದರಿ ಅಂಶವನ್ನು ಕರಡು ವೇಳಾಪಟ್ಟಿಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.
   ಇ. ಒಂದು ವೇಳೆ ಯಾವುದೇ ವರ್ಷದ (ಉದಾ: ಪ್ರಥಮ ವರ್ಷದ) ಅಂತಿಮ ತಂಡದ ಪ್ರಾಯೋಗಿಕ ಪರೀಕ್ಷೆಯು ಯಾವುದೇ ದಿನದ ಪೂರ್ವಾಹ್ನ ಮುಕ್ತಾಯಗೊಂಡಲ್ಲಿ, ನಂತರ ವರ್ಷಗಳ (ದ್ವಿತೀಯ ಅಥವಾ ತೃತೀಯ ವರ್ಷದ) ಪ್ರಾಯೋಗಿಕ ಪರೀಕ್ಷೆಗಳ ಪ್ರಥಮ ತಂಡದ ಪರೀಕ್ಷೆಯನ್ನು ಅದೇ ದಿನದ ಅಪರಾಹ್ನ ಆರಂಭಿಸಬೇಕು.
10. ಪ್ರಾಯೋಗಿಕ ಪರೀಕ್ಷೆ ನಡೆದಾಗ ಪ್ರತಿದಿನ ಪ್ರತಿ ವಿಷಯದಲ್ಲಿ ನಡೆಸಲಾದ ಎರಡೂ ತಂಡಗಳ ಅಂಕಪಟ್ಟಿಗಳನ್ನು ಆಯಾ ತಂಡದ ಅಂಕಪಟ್ಟಿ ಲಕೋಟೆಯಲ್ಲಿಟ್ಟು ಮೊಹರು ಮಾಡಬೇಕು. ಲಕೋಟೆ ಮೇಲೆ ಕಾಣಿಸಿದ ಪ್ರತಿಯೊಂದು ಮಾಹಿತಿಯನ್ನು ಸ್ಪಷ್ಟವಾಗಿ ಬರೆಯಲು ಆಯಾ ಪರೀಕ್ಷಕರಿಗೆ ತಿಳಿಸಬೇಕು. ಆ ಕೇಂದ್ರದ ಆಯಾ ದಿನದ ಪ್ರಾಯೋಗಿಕ ಪರೀಕ್ಷೆಗಳು ಮುಗಿದ ಕೂಡಲೇ ವಿಷಯವಾರು ಮೊಹರು ಮಾಡಿದ ಅಂಕಪಟ್ಟಿಯನ್ನಿಟ್ಟು ಲಕೋಟೆಗಳನ್ನು ಮತ್ತು ಆಯಾ ವಿಷಯದ ಪ್ರಾಯೋಗಿಕ ಉತ್ತರ ಪತ್ರಿಕೆ ಬಂಡಲ್ ಗಳನ್ನು ಪ್ರತ್ಯೇಕವಾಗಿ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ಸಲ್ಲಿಸಬೇಕು.
11. ಪ್ರತಿಯೊಂದು ತಂಡದ ಪ್ರಾಯೋಗಿಕ ಪರೀಕ್ಷಾ ಅಂಕಪಟ್ಟಿಯನ್ನು ಏಕ ಪ್ರತಿಯಲ್ಲಿ ತಯಾರಿಸಲು ಸಂಬಂಧಪಟ್ಟ ಪರೀಕ್ಷಕರಿಗೆ ತಿಳಿಸತಕ್ಕದ್ದು.
12. ಪ್ರಾಯೋಗಿಕ ಪರೀಕ್ಷೆಯ ಅಂಕಪಟ್ಟಿ ತಃಖ್ತೆಯಲ್ಲಿ (Marks List / A Form) ಕೆಳಕಂಡ ಮಾಹಿತಿಯನ್ನು ಕಡ್ಡಾಯವಾಗಿ ನಮೂದಿಸಲು ಪರೀಕ್ಷಕರಿಗೆ ತಿಳಿಸತಕ್ಕದ್ದು.
    1. ಪರೀಕ್ಷೆಯ ದಿನಾಂಕ:
    2. ವಿಷಯ ಮತ್ತು ಕೋಡ್ ನಂಬರ್

ಪು.ತಿ.ನೋ.

3. **ರಿಜಿಸ್ಟರ್ ನಂಬರ್ ನ ಎಲ್ಲಾ ಎಂಟು ಅಂಕಿಗಳು** (ವಿಷಯದ ಕೋಡ್ ನಂಬರ್ ಗಳನ್ನು ಆಯಾ ಕಾಲೇಜಿನ ಮುಖ್ಯ ಅಧೀಕ್ಷಕರಿಂದ ಪಡೆಯಬೇಕೆಂದು ಪರೀಕ್ಷಕರಿಗೆ ತಿಳಿಸಬೇಕು).

13. ಪ್ರಾಯೋಗಿಕ ಪರೀಕ್ಷೆಗೆ ಸಂಬಂಧಪಟ್ಟ ವಿಷಯವಾರು ಕ್ರೋಢಿಕೃತ ಕಾರ್ಯ ನಿರ್ವಹಣಾ ತಃಖ್ತೆ (Workdone Statement) ಹಾಗೂ ಪ್ರಯಾಣ ಭತ್ಯೆ ಬಿಲ್ಲುಗಳನ್ನು ದೃಢೀಕರಿಸಿ, ಕುಲಸಚಿವರು(ಪರೀಕ್ಷಾಂಗ)ರವರ ಕಛೇರಿಗೆ ಪ್ರಾಯೋಗಿಕ ಪರೀಕ್ಷೆ ಮುಗಿದ 15 ದಿನಗಳೊಳಗಾಗಿ ವಿಶ್ವವಿದ್ಯಾನಿಲಯ ನಿಗಧಿಪಡಿಸಿದ ನಮೂನೆಯಲ್ಲಿ ಸಲ್ಲಿಸತಕ್ಕದ್ದು. ಕೆಲವು ಉಪನ್ಯಾಸಕರುಗಳು ತಡವಾಗಿ ವರ್ಷಗಟ್ಟಲೆ ನಿರ್ವಹಣಾ ತಃಖ್ತೆ/ಬಿಲ್ಲುಗಳನ್ನು ಸಲ್ಲಿಸದೇ ನಂತರದಲ್ಲಿ ಕಳುಹಿಸುವುದನ್ನು ಗಮನಿಸಲಾಗಿದೆ. ಇನ್ನು ಮುಂದೆ ವಿಳಂಬವಾಗಿ ಸಲ್ಲಿಸಿದ ಬಿಲ್ಲುಗಳನ್ನು ಮಾನ್ಯ ಮಾಡಲಾಗುವುದಿಲ್ಲ ಎಂದು ಭಾವಿಸತಕ್ಕದ್ದು.

14. ಪ್ರಾಯೋಗಿಕ ಪರೀಕ್ಷೆಗೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯ ನೀಡುವ ಸೂಚನೆಗಳನ್ನು ಪರೀಕ್ಷಕರಿಗೆ ಕಳುಹಿಸತಕ್ಕದ್ದು.

04/04

ಕುಲಸಚಿವರು (ಪರೀಕ್ಷಾಂಗ)
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ – 577 002

ಗೆ:

1. ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಬಿ.ಎ/ಬಿ.ಎಸ್ಸಿ/ಬಿ.ಸಿ.ಎ/ಬಿ.ಎಸ್.ಎ/ಬಿ.ಎಫ್.ಡಿ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ / ಮುಖ್ಯ ಅಧೀಕ್ಷಕರುಗಳಿಗೆ.
2. ಪ್ರಾಯೋಗಿದ ಪರೀಕ್ಷೆಯ ಎಲ್ಲಾ ಸಂಯೋಜನಾಧಿಕಾರಿಗಳಿಗೆ.

**ಪ್ರತಿಗಳು:**

1. ಆಪ್ತ ಸಹಾಯಕರು, ಮಾನ್ಯ ಕುಲಪತಿಗಳು/ಕುಲಸಚಿವರು/ಹಣಕಾಸು ಅಧಿಕಾರಿಗಳು ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
2. ಹುಂಡಿ ಪ್ರತಿ.
3. ಕಛೇರಿ ಪ್ರತಿ.

---

# ದಾವಣಗೆರೆ ವಿಶ್ವವಿದ್ಯಾನಿಲಯ

ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ, ಶಿವಗಂಗೋತ್ರಿ, ದಾವಣಗೆರೆ-577 002.

ದೂರವಾಣಿ ಸಂಖ್ಯೆ: 08192-208420/208104

ಸಂಖ್ಯೆ/ದಾವಿ/ಪವಿ/ಬಿ.ಬಿ.ಎಂ/2016-17/25 ದಿನಾಂಕ: 04-04-2017

## ಅಧಿಸೂಚನೆ

ವಿಷಯ: ಏಪ್ರಿಲ್ /ಮೇ-2017ರಲ್ಲಿ ನಡೆಯಲಿರುವ ಬಿ.ಬಿ.ಎಂ 6ನೇ ಸೆಮಿಸ್ಟರ್ ಪ್ರಾಜೆಕ್ಟ್ ವರ್ಕ್ ಮೌಲ್ಯಮಾಪನ ನಡೆಸಲು ಮುಖ್ಯ ಅಧೀಕ್ಷಕರುಗಳ ಹಾಗೂ ಕೋ-ಆರ್ಡಿನೇಟರಗಳ ನೇಮಕಾತಿ ಮತ್ತು ಸೂಚನೆಗಳು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 03-04-2017

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಏಪ್ರಿಲ್ /ಮೇ-2017ರಲ್ಲಿ ನಡೆಯಲಿರುವ 6ನೇ ಸೆಮಿಸ್ಟರ್ ಪ್ರಾಜೆಕ್ಟ್ ವರ್ಕ್ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಆಯಾ ಕಾಲೇಜಿನ ಪ್ರಾಂಶುಪಾಲರನ್ನು ಮುಖ್ಯ ಅಧೀಕ್ಷಕರನ್ನಾಗಿ ಮತ್ತು ಈ ಕೆಳಕಂಡವರನ್ನು ಜಿಲ್ಲಾವಾರು ಸಂಯೋಜನಾಧಿಕಾರಿಗಳನ್ನಾಗಿ(ಕೋ-ಆರ್ಡಿನೇಟರ್) ನೇಮಕ ಮಾಡಲಾಗಿದೆ.

| ಕ್ರ.ಸಂ. | ಸಂಯೋಜನಾಧಿಕಾರಿಗಳ ಹೆಸರು ಮತ್ತು ವಿಳಾಸ | ಜಿಲ್ಲಾವಾರು |
|---|---|---|
| 1. | ಶ್ರೀ ಮರುಳಸಿದ್ದಪ್ಪ ಎಲ್. ಸಹಾಯಕ ಪ್ರಾಧ್ಯಾಪಕರು, ಸ್ನಾತಕ ವಾಣಿಜ್ಯಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರ, ದಾವಣಗೆರೆ. 9449081104 | ದಾವಣಗೆರೆ ಜಿಲ್ಲೆಯ ವ್ಯಾಪ್ತಿಗೊಳಪಡುವ ಎಲ್ಲಾ ಬಿ.ಬಿ.ಎಂ. ಕಾಲೇಜುಗಳು |
| 2. | ಶ್ರೀ ಲಕ್ಷ್ಮೀರಂಗನಾಥ್ ಆರ್. , ಸಹಾಯಕ ಪ್ರಾಧ್ಯಾಪಕರು, ಸ್ನಾತಕ ವಾಣಿಜ್ಯಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸದುರ್ಗ. 9480468935 | ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಗೊಳಪಡುವ ಎಲ್ಲಾ ಬಿ.ಬಿ.ಎಂ. ಕಾಲೇಜುಗಳು |

## ಮುಖ್ಯ ಅಧೀಕ್ಷಕರಿಗೆ ಸೂಚನೆಗಳು:

1. ಬಿ.ಬಿ.ಎಂ. ಪದವಿಯ ಪ್ರಾಜೆಕ್ಟ್ ವರ್ಕ್ ಮೌಲ್ಯಮಾಪನಗಳನ್ನು **ದಿನಾಂಕ:25-04-2017ರಿಂದ** ಪ್ರಾರಂಭಿಸಿ **ದಿನಾಂಕ:09-05-2017ರ** ಒಳಗೆ ಮುಕ್ತಾಯಗೊಳ್ಳುವಂತೆ ಸೂಚಿಸಿದೆ, ಈ ಮೌಲ್ಯಮಾಪನ ಕರಡು ವೇಳಾ ಪಟ್ಟಿಯನ್ನು ತಯಾರಿಸಿ ಸಂಯೋಜಕರಿಗೆ (ಕೋ-ಆರ್ಡಿನೇಟರುಗಳಿಗೆ) **ದಿನಾಂಕ:18-04-2017ರ** ಒಳಗಾಗಿ ತಲುಪುವಂತೆ ಕಳುಹಿಸಿ ಅದರ ಇನ್ನೊಂದು ಪ್ರತಿಯನ್ನು ಕುಲಸಚಿವರು(ಪರೀಕ್ಷಾಂಗ)ರವರ ಕಛೇರಿಗೆ ಕಳುಹಿಸಬೇಕು.
2. ಪ್ರಾಜೆಕ್ಟ್ ವರ್ಕ್ ಮೌಲ್ಯಮಾಪನದ ಪ್ರತಿಯೊಂದು ತಂಡದಲ್ಲಿ ಒಬ್ಬ ಬಾಹ್ಯ ಪರೀಕ್ಷಕರು ಇರುವಂತೆ ನೋಡಿಕೊಳ್ಳಬೇಕು.
3. ಯಾರಾದರೂ ಬಾಹ್ಯ ಪರೀಕ್ಷಕರು ಬಾರದಿದ್ದಲ್ಲಿ ಹತ್ತಿರದ ಮತ್ತೊಂದು ಕಾಲೇಜಿನಿಂದ ಬಾಹ್ಯ ಪರೀಕ್ಷಕರನ್ನು ನೇಮಿಸಿ, ಇದನ್ನು ಸಂಬಂಧಪಟ್ಟ ಸಂಯೋಜನಾಧಿಕಾರಿಗೆ ಮತ್ತು ಕುಲಸಚಿವರು(ಪರೀಕ್ಷಾಂಗ) ಅವರಿಗೆ ಅದೇ ದಿನವೇ ತಿಳಿಸಬೇಕು. ಒಂದು ವೇಳೆ ಬಾಹ್ಯ ಪರೀಕ್ಷಕರು ಲಭ್ಯವಾಗದಿರುವ ಸಂದರ್ಭ ಬಂದರೆ, ಅಂತಹ ತಂಡದ ಪ್ರಾಜೆಕ್ಟ್ ವರ್ಕ್ ಮೌಲ್ಯಮಾಪನವನ್ನು ರದ್ದುಪಡಿಸಿ ಮುಂದೂಡಬೇಕು ಹಾಗೂ ತತ್ಸಂಬಂಧವಾಗಿ ವಿಷಯವನ್ನು ಅಂದೇ **ಕುಲಸಚಿವರು(ಪರೀಕ್ಷಾಂಗ)** ಅವರಿಗೆ ತಿಳಿಸಬೇಕು.
4. ಯಾವುದೇ ಕಾರಣಕ್ಕೂ ಒಂದು ತಂಡಕ್ಕೆ ಇಬ್ಬರೂ ಆಂತರಿಕ ಪರೀಕ್ಷಕರಾಗಿರಕೂಡದು ಮತ್ತು ವಿಶ್ವವಿದ್ಯಾನಿಲಯದಿಂದ ಅನುಮೋದಿತಗೊಂಡ ಪರೀಕ್ಷಕರ ಪಟ್ಟಿಯಲ್ಲಿದ್ದವರನ್ನು ಮಾತ್ರ ಪರೀಕ್ಷಕರನ್ನಾಗಿ ನೇಮಿಸಬೇಕು.
5. ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಲು ಬರುವ (External) ಉಪನ್ಯಾಸಕರು ವಿದ್ಯಾರ್ಥಿಗಳಿಗೆ ತೊಂದರೆ ನೀಡಿದ್ದಲ್ಲಿ ಅವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು.
6. ಹುಂಡಿಗಳನ್ನು ಪ್ರಾಜೆಕ್ಟ್ ವರ್ಕ್ ಮೌಲ್ಯಮಾಪನ ಮುಗಿದ ನಂತರ ಒಂದು ವಾರದೊಳಗಾಗಿ ಕುಲಸಚಿವರು(ಪರೀಕ್ಷಾಂಗ) ಇವರಿಗೆ ಕಳುಹಿಸತಕ್ಕದ್ದು.

ಪು.ತಿ.ನೋ

**ಪ್ರಾಜೆಕ್ಟ್ ವರ್ಕ್ ಸಂಯೋಜನಾಧಿಕಾರಿಗಳಿಗೆ (ಕೋ-ಆರ್ಡಿನೇಟರಗಳಿಗೆ) ಸೂಚನೆಗಳು:**

1. ಪ್ರಾಜೆಕ್ಟ್ ವರ್ಕ್ ಮೌಲ್ಯಮಾಪನವನ್ನು **ದಿನಾಂಕ: 25-04-2017**ರಿಂದ ಆರಂಭಿಸಿ **09-05-2017**ರ ಒಳಗಾಗಿ ಮುಕ್ತಾಯಗೊಳಿಸಬೇಕು.
2. ಪ್ರಾಜೆಕ್ಟ್ ವರ್ಕ್ ಮೌಲ್ಯಮಾಪನ ಸಂಯೋಜನಾಧಿಕಾರಿಗಳು ತಮಗೆ ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರನ್ನು ಪ್ರಾಜೆಕ್ಟ್ ವರ್ಕ್ ಮೌಲ್ಯಮಾಪನ ನಡೆಸುವ ಸಂಬಂಧ ಕೂಡಲೇ ಸಂಪರ್ಕಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.
3. ವಿಶ್ವವಿದ್ಯಾನಿಲಯದಿಂದ ಅನುಮೋದಿಸಲ್ಪಟ್ಟ ಪರೀಕ್ಷಕರ ಪಟ್ಟಿಯಿಂದಲೇ ಮೌಲ್ಯಮಾಪಕರನ್ನು ಆಯ್ಕೆ ಮಾಡಬೇಕು. ಪ್ರಾಜೆಕ್ಟ್ ವರ್ಕ್ ಮೌಲ್ಯಮಾಪನದ ಪ್ರತಿ ತಂಡಕ್ಕೆ ಇಬ್ಬರು ಮೌಲ್ಯಮಾಪಕರಿದ್ದು, ಅವರಲ್ಲಿ ಒಬ್ಬರು ಆಂತರಿಕ ಪರೀಕ್ಷಕರೂ, ಇನ್ನೊಬ್ಬರು ಬಾಹ್ಯ ಮೌಲ್ಯಮಾಪಕರಾಗಿರಬೇಕು. **ಅಸಾಧಾರಣ ಸಂದರ್ಭಗಳಲ್ಲಿ ಇಬ್ಬರೂ ಬಾಹ್ಯ ಪರೀಕ್ಷಕರಾಗಿರಬಹುದು. ಆದರೆ ಯಾವುದೇ ಪ್ರಸಂಗದಲ್ಲೂ ಇಬ್ಬರೂ ಆಂತರಿಕ ಮೌಲ್ಯಮಾಪಕರಾಗಿರಕೂಡದು.**
4. ಬಾಹ್ಯ ಮೌಲ್ಯಮಾಪಕರನ್ನು ನೇಮಕ ಮಾಡುವಾಗ ಆದಷ್ಟು ಹತ್ತಿರದ ಕಾಲೇಜುಗಳಿಂದ ಆಯ್ಕೆ ಮಾಡಬೇಕೇ ವಿನಃ ದೂರದ ಕಾಲೇಜುಗಳಿಂದಲ್ಲ. ದೂರದ ಕಾಲೇಜುಗಳಿಂದ ಆಯ್ಕೆ ಮಾಡಿದ್ದಲ್ಲಿ **ಅವರ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆಗಳ ಹುಂಡಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.**
5. ಒಬ್ಬ ಬಾಹ್ಯ ಮೌಲ್ಯಮಾಪಕರು, ಒಂದು ಅಥವಾ ಎರಡು ಕಾಲೇಜುಗಳಲ್ಲಿ ಮಾತ್ರ ಈ ಮೌಲ್ಯಮಾಪನದ ಕೆಲಸ ನಿರ್ವಹಿಸಬೇಕು.
6. ಒಂದು ಮೌಲ್ಯಮಾಪನ ಕೇಂದ್ರದಲ್ಲಿ ಒಬ್ಬ ಮೌಲ್ಯಮಾಪಕರಿಗೆ ಸಾಕಾಗುವಷ್ಟು ಪರೀಕ್ಷಾ ಕೆಲಸವಿದ್ದಾಗ ಅವರ ಭಾಗದ ಆ ಕೆಲಸವನ್ನು ಅದೇ ಕೇಂದ್ರದಲ್ಲಿ ಕೊಡಬೇಕು. ಯಾವುದೇ ಸಂದರ್ಭದಲ್ಲಿಯೂ ಭಾಗಶಃ ಕೆಲಸವನ್ನು ಬೇರೆ ಬೇರೆ ಕೇಂದ್ರಗಳಲ್ಲಿ ಒಬ್ಬರಿಗೆ ಕೊಡಬಾರದು.
7. ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಲು ಬರುವ (External) ಉಪನ್ಯಾಸಕರು ವಿದ್ಯಾರ್ಥಿಗಳಿಗೆ ತೊಂದರೆ ನೀಡಿದ್ದಲ್ಲಿ ಅವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು.
8. ಸಂಯೋಜನಾಧಿಕಾರಿಗಳು ಮುಖ್ಯ ಅಧೀಕ್ಷಕರಿಗೆ ವಿದ್ಯಾರ್ಥಿಗಳ ಪ್ರಾಜೆಕ್ಟ್ ವರ್ಕ್ ತಂಡಗಳನ್ನು ರಚಿಸಿ, ಕರಡು ವೇಳಾಪಟ್ಟಿಯನ್ನು ಸಲ್ಲಿಸುವಂತೆ ಕೋರುವಾಗ ಈ ಕೆಳಕಂಡ ಅಂಶಗಳನ್ನು ಗಮನಿಸುವಂತೆ ತಿಳಿಸಬೇಕು.

   **ಅ) ಸಾಮಾನ್ಯವಾಗಿ ಪ್ರತಿ ತಂಡದಲ್ಲಿ 15 ಜನ ವಿದ್ಯಾರ್ಥಿಗಳು ಇರತಕ್ಕದ್ದು.**
9. ಪ್ರಾಜೆಕ್ಟ್ ವರ್ಕ್ ಮೌಲ್ಯಮಾಪನ ನಡೆದಾಗ ಪ್ರತಿದಿನ ಪ್ರತಿ ವಿಷಯದಲ್ಲಿ ನಡೆಸಲಾದ ಮೌಲ್ಯಮಾಪನದ ಅಂಕ ತಃಖ್ತೆಯನ್ನು ಎರಡೂ ತಂಡಗಳ ಅಂಕಪಟ್ಟಿಗಳನ್ನು ಆಯಾ ತಂಡದ ಅಂಕತಃಖ್ತೆ ಲಕೋಟೆಯಲ್ಲಿಟ್ಟು ಮೊಹರು ಮಾಡಬೇಕು. ಲಕೋಟೆ ಮೇಲೆ ಕಾಣಿಸಿದ ಪ್ರತಿಯೊಂದು ಮಾಹಿತಿಯನ್ನು ಸ್ಪಷ್ಟವಾಗಿ ಬರೆಯಲು ಆಯಾ ಪರೀಕ್ಷಕರಿಗೆ ತಿಳಿಸಬೇಕು. ಆ ಕೇಂದ್ರದ ಆಯಾ ದಿನದ ಪ್ರಾಜೆಕ್ಟ್ ವರ್ಕ್ ಮೌಲ್ಯಮಾಪನ ಮುಗಿದ ಕೂಡಲೇ ವಿಷಯವಾರು ಮೊಹರು ಮಾಡಿದ ಅಂಕ ತಃಖ್ತೆಯನ್ನಿಟ್ಟು ಲಕೋಟೆಗಳನ್ನು ಕೇಂದ್ರದ ಮುಖ್ಯ ಅಧೀಕ್ಷಕರಿಗೆ ಸಲ್ಲಿಸಬೇಕು.
10. ಪ್ರಾಜೆಕ್ಟ್ ವರ್ಕ್ (80 ಅಂಕಗಳು) ಮತ್ತು ವೈವಾ (20 ಅಂಕಗಳು) ಅಂಕಗಳನ್ನು ಬಾಹ್ಯ ಪರೀಕ್ಷಕರ ಸಮ್ಮುಖದಲ್ಲೇ ನಿಗಧಿ ಪಡಿಸಿ ಅದೇ ದಿನದಂದು ಕಳುಹಿಸಿಕೊಡಬೇಕು.
11. ಪ್ರತಿಯೊಂದು ತಂಡದ ಪ್ರಾಜೆಕ್ಟ್ ವರ್ಕ್ ಮೌಲ್ಯಮಾಪನ ಅಂಕತಃಖ್ತೆಯನ್ನು ಏಕ ಪ್ರತಿಯಲ್ಲಿ ತಯಾರಿಸಲು ಸಂಬಂಧಪಟ್ಟ ಮೌಲ್ಯಮಾಪಕರುಗೆ ತಿಳಿಸತಕ್ಕದ್ದು.
12. ಪ್ರಾಜೆಕ್ಟ್ ವರ್ಕ್ ಮೌಲ್ಯಮಾಪನಕ್ಕೆ ಸಂಬಂಧಪಟ್ಟ ವಿಷಯವಾರು ಕ್ರೋಢೀಕೃತ ಕಾರ್ಯ ನಿರ್ವಹಣಾ ತಃಖ್ತೆಯನ್ನು ಅಂಕ ತಃಖ್ತೆಯೊಂದಿಗೆ ಧೃಢೀಕರಿಸಿ ಕುಲಸಚಿವರು(ಪರೀಕ್ಷಾಂಗ)ರವರ ಕಛೇರಿಗೆ ಪ್ರಾಜೆಕ್ಟ್ ವರ್ಕ್ ಮೌಲ್ಯಮಾಪನ ಮುಗಿದ 07 ದಿನಗಳೊಳಗಾಗಿ ವಿಶ್ವವಿದ್ಯಾಲಯ ನಿಗಧಿಪಡಿಸಿದ ನಮೂನೆಯಲ್ಲಿ ಸಲ್ಲಿಸತಕ್ಕದ್ದು.

04/04

**ಕುಲಸಚಿವರು (ಪರೀಕ್ಷಾಂಗ)**
**ದಾವಣಗೆರೆ ವಿಶ್ವವಿದ್ಯಾನಿಲಯ**
**ಶಿವಗಂಗೋತ್ರಿ, ದಾವಣಗೆರೆ – 577 002**

ಗೆ:

1. ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಬಿ.ವಿ.ಎಂ. ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ/ಮುಖ್ಯ ಅಧೀಕ್ಷಕರುಗಳಿಗೆ.
2. ಪ್ರಾಜೆಕ್ಟ್ ವರ್ಕ್ ಪರೀಕ್ಷೆಯ ಎಲ್ಲಾ ಸಂಯೋಜನಾಧಿಕಾರಿಗಳಿಗೆ.

ಪ್ರತಿಗಳು:

1. ಮಾನ್ಯ ಕುಲಪತಿಗಳು/ಕುಲಸಚಿವರು/ಹಣಕಾಸು ಅಧಿಕಾರಿಗಳ ಆಪ್ತ ಕಾರ್ಯಾಲಯ, ದಾವಣಗೆರೆ ವಿಶ್ವವಿದ್ಯಾಲಯ, ಶಿವಗಂಗೋತ್ರಿ, ದಾವಣಗೆರೆ.
2. ಉಪ ಕುಲಸಚಿವರು(ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾಲಯ, ಶಿವಗಂಗೋತ್ರಿ, ದಾವಣಗೆರೆ.
3. ವಿಷಯ ನಿರ್ವಾಹಕರಿಗೆ, ಪರೀಕ್ಷಾ ವಿಭಾಗ, ದಾವಣಗೆರೆ ವಿಶ್ವವಿದ್ಯಾಲಯ, ಶಿವಗಂಗೋತ್ರಿ, ದಾವಣಗೆರೆ.
4. ಹುಂಡಿ ಪ್ರತಿ
5. ಕಛೇರಿ ಪ್ರತಿ

------